ಸಿಸಿ ನಂ. 2589/2023
ಸಿ.ಡಬ್ಲೂ-14 ಪಿ.ಡೂ: 8

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.

| | | |
|---|---|---|
| ಸಾಕ್ಷಿದಾರನ ಹೆಸರು | : | ಶ್ರೀಶೈಲ್ ಸಂಕದ |
| ತಂದೆ ಹೆಸರು | : | ನಾಗಪ್ಪ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ನಿವೃತ್ತ ಎ.ಎಸ್.ಐ. |
| ವಾಸ ಸ್ಥಳ | : | ಸಿಂದಗಿ |

ದಿನಾಂಕ 12-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭಿಯೋಜಕ ರವರಿಂದ.**

ನಾನು ಸಿಂದಗಿ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಎಂದು 2020 ರಿಂದ 2024 ರ ವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ. 3-9-2022 ರಂದು ಸಿಂದಗಿ ಪೋಲಿಸ್ ಠಾಣೆಯಲ್ಲಿ ನಾನು ಕರ್ತವ್ಯಯದಲ್ಲಿದ್ದಾಗ ಮದ್ಯಾಹ್ನ 2-15 ಗಂಟೆ ಸುಮಾರಿಗೆ ಚಾ.ಸಾ.1, ರವರು ನನ್ನ ಮುಂದೆ ಹಾಜರಾಗಿ ಮೌಖಿಕ ದೂರನ್ನು ನೀಡಿದ್ದು, ನಾವು ಅದನ್ನು ಗಣಕಿ ಕರಣ ಗೊಳಿಸಿ ಠಾಣಾ ಗುನ್ನಾ ನಂ.192/2020 ರಂತೆ ಪ್ರಕರಣ ದಾಖಲಿಸಿ ಪ್ರ.ವ.ವ.ವನ್ನು ನ್ಯಾಯಾಲಯಕ್ಕೆ ಮತ್ತು ಅದರ ಪ್ರತಿಯನ್ನು ಹಿರಿಯ ಅಧಿಕಾರಿಗಳಿಗೆ ಕಳುಹಿಸಿರುತ್ತೆನೆ. ದೂರನ್ನು ಗುರುತಿಸಿದ್ದು ಅದು ನಿ.ಪಿ. 1 ಎಂದು ಸಾಕ್ಷಿ ಸಹಿಯನ್ನು ನಿ.ಪಿ. 1 ಬಿ ಎಂದು, ಪ್ರ.ವ.ವ.ವನ್ನು ನಿ.ಪಿ.12 ಎಂದು, ಸಾಕ್ಷಿ ಸಹಿಯನ್ನು ನಿ.ಪಿ.12 ಎ ಎಂದು, ಗುರುತಿಸಲಾಯಿತು. ಅದೇ ದಿನ ಚಾ>ಸಾ. 1 ರವರ ಮರು ಹೇಳಿಕೆಯನ್ನು ಪಡೆದಿರುತ್ತೆನೆ.

3. ನಂತರ ಅದೇ ದಿನ ಸಂಜೆ 4-00 ರಿಂದ 5-00 ಗಂಟೆಯ ವರೆಗೆ ಚಾ.ಸಾ.2 ಮತ್ತು 3 ರವರ ಸಮಕ್ಷಮ ಗುನ್ಹಾ ಜಾಗಾಕ್ಕೆ ಹೋಗಿ ಪಂಚನಾಮೆಯನ್ನು ಮಾಡಿರುತ್ತೇನೆ. ಅದನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.2 ಡಿ ಎಂದು, ಗುರುತಿಸಲಾಯಿತು. ಫೋಟೊವನ್ನು ಈಗಾಗಲೇ ನಿ.ಪಿ. 3 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಅಪಘಾತದಲ್ಲಿ ಭಾಗಿಯಾದ ಎರಡು ಬೈಕ ಗಳಾದ ಕೆ.ಎ.28/ಇ.ಎಕ್ಸ.7167 ಮತ್ತು ಕೆಎ.21/ಎಕ್ಸ/2761 ಜಪ್ತಿ ಮಾಡಿಕೊಂಡಿರುತ್ತೇನೆ. ಜಪ್ತು ಪಂಚನಾಮೆಯನ್ನು ಈಗಾಗಲೇ ನಿ.ಪಿ. 4 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.4 ಸಿ ಎಂದು, ಗುರುತಿಸಲಾಯಿತು. ಫೋಟೊವನ್ನು ಈಗಾಗಲೇ ನಿ.ಪಿ. 5 ಎಂದು ಗುರುತಿಸಲಾಗಿರುತ್ತದೆ.

4. ಸಾಕ್ಷಿದಾರರಾದ ಚಾ>ಸಾ. 4 ರಿಂದ 8 ರವರ ಹೇಳಿಕೆಯನ್ನು ಪಡೆದಿರುತ್ತೆನೆ. ದಿ.26-9-2022 ರಂದು ಆರೋಪಿಯು ಹಾಜರಾಗಿದ್ದು, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಮೋಟಾರ ವಾಹನ ತಪಾಸಣಾ ವರದಿ ಬಂದಿದ್ದು, ಅದನ್ನು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ. ಅದು ಈಗಾಗಲೇ ನಿ.ಪಿ. 7 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.7 ಎ ಎಂದು, ಗುರುತಿಸಲಾಯಿತು. ಚಾ>ಸಾ. 4,5, ಶ್ರೀಶೈಲ್ ಮತ್ತು ಸಚಿನ ರವರ ಗಾಯದ ಪ್ರಮಾಣ ಪತ್ರವನ್ನು ಬಂದಿದ್ದು, ಅದನ್ನು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ. ಅವುಗಳು ಈಗಾಗಲೇ ನಿ.ಪಿ. 8 ರಿಂದ 11 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ.8 ಎ ರಿಂದ 11 ಎಎ ಎಂದು,

ಗುರುತಿಸಲಾಯಿತು.

5. ದಿ. 20-6-2023 ರಂದು ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಮದ್ಯಾಹ್ನ 12-35 ಗಂಟೆಯ ವರೆಗೂ ಕಾಯಲಾಗಿದ್ದು, ಆರೋಪಿಪರ ವಕೀಲರು ಗೈರು ಹಾಜರಾಗಿರುತ್ತಾರೆ. ಆದ್ದರಿಂದ ರೂ. 500/- ದಂಡವನ್ನು ವಿಧಿಸಿ ಪಾಟೀ ಸವಾಲನ್ನು ಮುಂದೂಡಲಾಯಿತು.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**
**ಓ.ಹೆ.ಕೆ.ಸರಿ. ಅದೇ**

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.
ಸಿಂದಗಿ